## ಅವಳ ಮಾತಿನಲ್ಲಿ...

"ರೀ ಎದ್ದೇಳ್ರೀ, ಟೀ ಕಾಫಿ ಏನು ಬೇಕು" ಅಂತ ಚೀರಿ ಕರೆದೆ, ಉಹೂಂ ಆಕಡೆಯಿಂದ ಮಿಸುಕಾಡಿದ ಸದ್ದು ಕೂಡ ಬರಲಿಲ್ಲ, ಆಫೀಸಿದ್ದರೆ ನೀಟಾಗಿ ಎದ್ದು ತಾವೇ ಹೊರಟು ಬಿಡುವರು, ಇಲ್ಲ ಅಂದ್ರೆ ಏಳಿಸಲು ಹರಸಾಹಸ ಮಾಡಬೇಕು, ಅತ್ತೆನ ಎಷ್ಟು ಸಾರಿ ಕೇಳಿದ್ದೀನಿ, "ನೀವು ಏಳಿಸುವಾಗಲೂ ಹೀಗೆ ಮಾಡ್ತಿದ್ರಾ" ಅಂತ, ಒಂದೊ ಪಾಪ ಮಗು ಮಲಗಿದೆ ಅಂತ ಏಳಿಸ್ತಿರಲಿಲ್ಲ ಅಂತೆ ಇಲ್ಲಾಂದ್ರೆ ತಾನೇ ಎದ್ದು ಬಿಡ್ತಿದ್ದ, ನೀನಂದ್ರೆ ಈ ರಗಳೆ ಅವನದು, ಅಂತ ನಗ್ತಿದ್ರು, ಅದೂ ನಿಜಾನೇ ನನಗೆ ಮಾತ್ರ ಇವರ ಕೀಟಲೆ ಕಾಟ, ನನಗೂ ಖುಷೀನೇ ದಿನಾ ಏನಾದ್ರೂ ಹೊಸ ಹೊಸ ಪ್ರಯೋಗಗಳ ಮಾಡ್ತೀನಿ. ಹಾಸಿಗೆ ಮೇಲೆ ಕೂತು ತಲೆ ಸವರಿದೆ, ಅದೇ ಕೈ ಹಿಡಿದುಕೊಂಡು ನನ್ನ ಕಾಲ ಮೇಲೇರಿ ಮಲಗಿದರು, ಇದೇನು ತೂಕಡಿಸುವವನಿಗೆ, ಹಾಸಿ ತಲೆದಿಂಬು ಕೊಟ್ಟಹಾಗಾಯ್ತು, ಅಂತನಿಸಿದರೂ ಗಾಢ ನಿದ್ರೆಯಲ್ಲಿರುವುದ ನೋಡಿ ಬಯ್ಯಲು ಮನಸು ಬರಲಿಲ್ಲ, ಹಾಗೆ ಸ್ವಲ್ಪ ಹೊತ್ತು ಕೂತಿದ್ದೆ, "ಏನು ಏಳಲ್ವಾ" ಅಂತ ಕೇಳಿದ್ದಕ್ಕೆ, "ಪ್ಲೀಜ" ಅಂತಂದು ಮಗ್ಗಲು ಬದಲಿಸಿದರು, ಮೊನ್ನೆ ತಾನೆ ಬೆಂಚು ಏನೂ ಕೆಲಸ ಇಲ್ಲ ಅಂತಿದ್ದವ್ರು, ಕಳೆದ ವಾರದಿಂದ ಅದೇನೊ ಟ್ರೇನಿಂಗ, ಮೀಟಿಂಗ ಅಂತ ಒಮ್ಮೆಲೇ ಬೀಜೀ ಆಗಿದ್ರು, ಅದೇನು ಸಾಫ್ಟವೇರ ಕೆಲಸಾನೊ, ಇದ್ರೆ ರಾಶಿ ರಾಶಿ ಕೆಲ್ಸ ಒಮ್ಮೊಮ್ಮೆ ಇಲ್ಲಾಂದ್ರೆ ಏನೂ ಇಲ್ಲ. ಮಲಗಲಿ ಬಿಡು ಅಂತ ಎದ್ದು ಬಂದೆ, ಆಗಲೇ ತಲೆಗೆ ಬಂತು ಈ ವಾರ ಅವರ ಬದಲಿಗೆ ನಾನು ಯಾಕೆ ಬರೆಯಬಾರದು ಅಂತ...

ನನ್ನ ಬಗ್ಗೆ ಅಂತೂ ಅವರು ಬಹಳ ಹೇಳಿರ್ತಾರೆ, ಯಾವಾಗಲೂ ಕೀಟಲೆ ತರಲೆ ಮಾಡೊ ತುಂಟಿ ಅಂತ, ನಾನೇನು ಅಷ್ಟು ತರಲೆ ಮೊದಲಿಂದಲೇ ಇರಲಿಲ್ಲ, ಎಲ್ಲ ಅವರಿಂದಾಗೆ ಆಗಿದ್ದು, ಅದ್ರೂ ಹಾಗನಿಸಿಕೊಳ್ಳಲು ಬೇಜಾರೇನಿಲ್ಲ. ಮದುವೆ ಆಗೊ ಮೊದಲು ಇವರು ಬರೆಯೋ ಲೇಖನ ಓದಿ, ನನ್ನ ಗೆಳತಿಯರೆಲ್ಲ, "ಅವರೇನೇನೋ ನಿರೀಕ್ಷೆ ಇಟ್ಕೊಂಡಿದಾರೆ ನೀನ್ ಹೇಗೆ ಸಂಭಾಳಿಸ್ತೀಯಾ", ಇಲ್ಲ "ಮೊದಲೇ ಬರೆಯೋ ಹುಚ್ಚು ಆದ ಮೇಲೂ ಹೀಗೆ ಬರೀತಾ ಕೂತ್ರೆ ಏನೇ ಮಾಡ್ತೀಯಾ" ಅಂತೆಲ್ಲಾ ಏನೇನೋ ಹೇಳಿ ಹೆದರಿಸಿಬಿಟ್ಟಿದ್ರು. ನನಗೂ ಹಾಗೇ ಅನ್ನಿಸಿತ್ತು ಮೊದಲೇ ನನ್ನ ಮಾತು ಅಪರೂಪ, ಇವರು ನೋಡಿದ್ರೆ ಅರಳು ಹುರಿದಂತೆ ಮಾತಾಡೋರು ಹೇಗಪ್ಪ ಅನ್ನೋ ಹಾಗಿತ್ತು. ಈಗ ಅಪ್ಪ ಅಂತಿರ್ತಾರೆ ಮದುವೆಗೆ ಮೊದಲು ಮಾತಾಡದೇ ಇದ್ದದ್ದೆಲ್ಲ ಈಗ ಮಾತಾಡಿ ತೀರಿಸಿಕೊಳ್ತಾ ಇದಾಳೆ ಅಂತ. ಆಗ ಅವರು ಹತ್ತು ಮಾತಾಡಿದರೆ ನಾನೊಂದು "ಹೂಂ", "ಹಾಂ" ಅಷ್ಟೇ, ಈಗ ಅವರೊಂದು ಶಬ್ದ, ತುಟಿ ಪಿಟಿಕ್ಕೆಂದರೆ, ನಾಲ್ಕು ಮಾತಾಡಿ ಬಾಯಿ ಮುಚ್ಚಿಸಿಬಿಡ್ತೀನಿ. ಮದುವೆಯಾದ ಹೊಸದರಲ್ಲಿ, ಏನಂದರೇನು ಕೀಟಲೆ, ಮೊದ ಮೊದಲು ಬಹಳ ಸಿಟ್ಟು ಬರೊದು, ಅತ್ತೆ ಕೂಡ "ಯಾಕೊ ಗೋಳುಹೊಯ್ಕೊತೀಯ ಅವಳ್ನಾ" ಅಂತ ನನ್ನ ಬೆಂಬಲಕ್ಕೆ ಬರೋರು, ಮೊದಲೇ ವಯಸ್ಸಿನ ಅಂತರ ದೊಡ್ಡೋರು, ಅಲ್ದೇ ಗಂಡ ಅಂತ ನನಗೆ ಹೆದರಿಕೆ, ಅಮ್ಮ ಅಪ್ಪನಿಗೆ ಹೆದರುತ್ತಿದ್ದುದ ನೋಡಿ ಬೆಳೆದಿದ್ದೆ. ಹೇಳಿದ್ದಕ್ಕೆ ತಿರುಗಿ ವಾದಿಸುವುದು ದೂರದ ಮಾತು, ಕೇಳಿದ್ದಕ್ಕೂ ಏನೂ ಹೇಳುತ್ತಿರಲಿಲ್ಲ, ಅವರು **ಸಂಗಾತಿಯಲ್ಲಿ ಸ್ನೇಹಿತೆಯನ್ನು ಹುಡುಕುತ್ತಿದ್ದುದ್ದು ನನಗೆ ಗೊತ್ತಾಗುವ ಹೊತ್ತಿಗೆ ತಡವಾಗಿತ್ತು**, ತಡವಾದರೂ ತಿದ್ದಿಕೊಂಡೆನಲ್ಲ ಅನ್ನೋದೇ ಸಮಾಧಾನ.

ಆ ದಿನದ ಬಗ್ಗೆ ಹೇಳಲೇಬೇಕು, ರಾತ್ರಿ ಮನೆಗೆ ಬಂದವರೇ ಒಂದು ಸೀರೀಯಸ್ ವಿಷಯ ಹೇಳಬೇಕು ಅಂತಂದರು, ಊಟ ಆಗಿ ಕೂರುತ್ತಿದ್ದಂತೆ, "ಆ ಸಿಗ್ನಲ್ಲಿನಲ್ಲಿ ದಿನಾಲೂ ಸಿಗುವ ಹುಡುಗಿ ಮದುವೆ ಆಗಬೇಕು ಅಂತಿದೀನೀ" ಅಂದ್ರು. ಅಕಾಶಾನೇ ಕಡಿದುಕೊಂಡು ತಲೇ ಮೇಲೆ ಬಿದ್ದ ಹಾಗಾಯ್ತು, ಏನು ಅಂತ ಕೇಳಬೇಕು ಗೊತ್ತಾಗಲಿಲ್ಲ, ಸುಮ್ನೇ ಇದ್ದೆ. "ನಿನ್ನ ಅಭಿಪ್ರಾಯ ಏನು" ಅಂತ ಮತ್ತೆ ಕೇಳಿದ್ರು, ಏನು ಅವಳನ್ನ ಮದುವೆಯಾಗಿ ನಾಲ್ಕು ಮಕ್ಕಳಾಗಿ ಸುಖವಾಗಿರಿ ಅಂತಾನಾ ನನ್ನ ಅಭಿಪ್ರಾಯ ಇರತ್ತೆ, ಸಿಟ್ಟು ಬಂತು, "ಹೆಂಡ್ತೀ ಅಂತ ನಾನಿಲ್ವಾ" ಅಂದೆ, "ಇದೀಯಾ ಅವಳೂ ಹೆಂಡ್ತಿ ಅಂತ ಆಗಿರ್ತಾಳೆ" ಅಂದ್ರು, "ನಮ್ಮಪ್ಪನಿಗೆ ಫೋನು ಮಾಡ್ತೀನಿ ನಾನು" ಅಂತ ಮೇಲೆದ್ದೆ, "ನಿಮ್ಮಪ್ಪ ಅಲ್ಲ ನಿಮ್ಮಜ್ಜನಿಗೇ ಹೇಳು ನಾನು ಕೇಳಲ್ಲ, ಅವಳನ್ನ ಯಾಕೆ ಮದುವೆ ಆಗಬಾರದು ಹೇಳು ಮೊದಲು" ಅಂತ ಅಲ್ಲೇ ಹಿಡಿದು ಕೂರಿಸಿದ್ರು, ಏನೇ ಆದ್ರೂ ಅಪ್ಪನಿಗೆ ಹೇಳೋ ಬುದ್ಧಿ ನನಗೆ ಆವಾಗ, ಈಗ ಇವರೊ ಬಿಡುತ್ತಿಲ್ಲ, ಏನಾದ್ರೂ ಹೇಳಲೇಬೇಕಿತ್ತು, "ನನ್ನ ಮದುವೆ ಆಗೀದೀರಾ" ಅಂದೆ, "ಅವಳನ್ನೂ ಆಗ್ತೀನಿ" ಅಂತಂದ್ರು, ಒಳ್ಳೆ ಹಠವಾದಿ ಸಹವಾಸ ಆಯ್ತಲ್ಲ ಅಂತ ಬಯ್ಕೊಂಡೆ. ಈಗ ಏನಾದ್ರೂ ಹಾಗೆ ಕೇಳಿದ್ರೆ "ರೀ ಕಲ್ಯಾಣ ಮಂಟಪ ಯಾವುದು ಬುಕ್ ಮಾಡಲಿ" ಅಂತ ಕೇಳಿರ್ತಿದ್ದೆ, ಇಲ್ಲ ದೊಡ್ಡ ವಾದ ಮಂಡಿಸಿರುತ್ತಿದ್ದೆ, ಆಗ ಎಲ್ಲ ಹೊಸದು, ಪ್ರತಿವಾದ ಮಾಡಲು ಬರುತ್ತಿರಲಿಲ್ಲ, ಆದರೂ "ಕೇಸು ಹಾಕ್ತೀನಿ" ಅಂತ ಹೆದರಿಸಿದೆ, "ಕೋರ್ಟ ಕಚೇರಿ ಅಲೀತಾ ಇರು, ಇಬ್ರೂ ಸತ್ತು ಹೋದ ತೀರ್ಪು ಹೊರಗೆ ಬರುತ್ತೆ" ಅಂದ್ರು. ಸಿಟ್ಟು ಸೆಡವು ಎಲ್ಲ ಸೇರಿತು, ವಾದಕ್ಕಿಳಿದಿದ್ದೆ. "ಅಂದವಾಗಿದಾಳ" ಅಂದೆ, "ಒಹ್ ನಿನಗಿಂತ ಎರಡು ಪಟ್ಟು" ಅಂತ ಹುಬ್ಬೇರಿಸಿದ್ರು, ಅದ್ಕೆ ಆ ಲಲನಾಮಣಿ ಬಲೆಗೆ ಬಿದ್ದಿರೋದು ಅಂತ, "ಹಾಗಿದ್ರೆ ನನ್ನ ಮದುವೆ ಆಗೊ ಮೊದಲೇ ಯೊಚಿಸಬೇಕಿತ್ತು" ಅಂದ್ರೆ "ಮದುವೆ ಆದ ಮೇಲೆ ತಾನೆ ಅವಳು ಕಾಣಿಸಿದ್ದು" ಅಂತ ಮಾರುತ್ತರ. "ಅವಳನ್ನ ಮದುವೆ ಆದಮೇಲೆ ಇನ್ಯಾರೊ ಇಷ್ಟ ಆದ್ರೆ" ಹೀಗಳೆಯಲು ಪ್ರಯತ್ನಿಸಿದೆ. "ಆ ಇನ್ಯಾರನ್ನೊ ಮದುವೆ ಆಗ್ತೀನಿ" ಅಂದ್ರು ನಿರಾಯಾಸವಾಗಿ, ಕೋಪದಲ್ಲೇ "ಏನು ಮದುವೆ ಆಗೊದ್ರಲ್ಲಿ ಗಿನ್ನಿಸ

ರೆಕಾರ್ಡ ಮಾಡಬೇಕು ಅಂತಿದೆಯಾ" ಅಂದೆ, ನಕ್ಕರು. "ಮಕ್ಕಳು ಹುಟ್ಟಿಸೋದ್ರಲ್ಲೂ" ಅಂತ, ನನಗೂ ನಗು ಬಂತು ಆದ್ರೆ ವಿಷಯ ಗಂಭೀರವಾಗಿತ್ತಲ್ಲ, ನಗು ಎಲ್ಲಿ ಬರಬೇಕು. ಸರಿಯಾಗಿ ಮುಕ್ಕಲು ಘಂಟೆ ಕಿತ್ತಾಡಿದ್ವಿ, ಕೊನೆಗೆ "ಆ ಹುಡುಗೀನೇ ಮದುವೆ ಆಗೊದು ನಿಮ್ಮ ನಿರ್ಧಾರಾನ" ಅಂದ್ರೆ, "ಯಾರನ್ನ" ಅಂದ್ರು. "ಯಾರನ್ನ ಅಂದ್ರೆ, ಎನು ಇಬ್ರು ಮೂರು ಜನ ಇದಾರ, ಅದೇ ಸಿಗ್ನಲ ಹುಡುಗಿ" ಅಂದೆ "ಯಾವ ಸಿಗ್ನಲ್ಲು" ಅಂದ್ರು, ಕೋಪ ನೆತ್ತಿಗೇರಿತು "ಅದೇ ಇಷ್ಟೊತ್ತು ಮದುವೆ ಆಗ್ತೀನಿ ಅಂತಿದ್ರಲ್ಲ", ನನ್ನ ಕೆಂಪೇರಿದ ಮುಖ ನೋಡಿ ಹೊಟ್ಟೆ ಹಿಡಿದುಕೊಂಡು ನಗತೊಡಗಿದ್ರು, ಆಗ಼್ಲೇ ಗೊತ್ತಾಗಿದ್ದು ಇಷ್ಟೊತ್ತು ಮಾಡಿದ್ದೆಲ್ಲ ನಾಟಕ, ಚೇಷ್ಟೆ ಅಂತ. ತಲೆದಿಂಬು ಕೈಲಿತ್ತು ಅದ್ರಿಂದ ಒಂದು ಕೊಟ್ಟೆ, ಅದೇ ಮೊದಲು ಅನ್ಸತ್ತೆ, ಆಮೇಲೆ ಈಗ ಎಷ್ಟು ಏಟು ತಿಂದೀದಾರೊ ಲೆಕ್ಕ ಇಲ್ಲ. ತಲೆದಿಂಬು ಕಸಿದು ಅಪ್ಪಿಕೊಂಡಿದ್ರೂ ಬೆನ್ನ ಮೇಲೆ ಏಟು ಬೀಳುತ್ತಲೇ ಇತ್ತು, ಕಣ್ಣಲ್ಲಿ ನೀರು ನಗು ಎಲ್ಲ... "ಇಷ್ಟು ಮಾತಾಡ್ತೀಯಾ, ಯಾಕೆ ಯಾವಾಗಲೂ ಸುಮ್ಮನಿರ್ತೀಯಾ, ಹೀಗೆ ತರಲೇ ಮಾಡೊ ಗೆಳತಿ ನಿನ್ನಲಿ ಹುಡುಕಿದ್ದು, ಇಂದು ಸಿಕ್ಕಳು" ಅಂತಿದ್ದರು, ಅಗಲೂ ಅಷ್ಟು ಮಾತಾಡಿರಲಿಲ್ಲ, ನಿಧಾನ ಹೊಂದಿಕೊಂಡೆ. ಅಪ್ಪ ಅಂತೂ "ಏನು ಜಾದೂ ಮಾಡಿದೀರಾ ಅಳಿಯಂದ್ರೆ, ಚಟಪಟ ಅಂತ ಮಾತಾಡೊ ಹಾಗೆ ನನ್ನ ಮಗಳಿಗೆ" ಅಂತ ಕೇಳುವಷ್ಟು ಬದಲಾದೆ, "ಅವರು ಹಾಗೆ ಮಾಡ್ತಾರೆ, ಹೀಗೆ ಕಾಡ್ತಾರೆ, ಅದು ಇಷ್ಟ, ಇದು ಅಂದ್ರೆ ಕೋಪ" ಅಂತೆಲ್ಲ ಏನೇನೊ ಹೇಳಿ ತಲೆ ತಿನ್ನುತ್ತಿದ್ದೆ. ಕೊನೇಗಂತೂ ಅಮ್ಮ "ಈ ನಿಮ್ಮ ತುಂಟಿನಾ ಕರೆದುಕೊಂಡು ಹೋಗಿ, ಇಲ್ಲಿ ತಲೆ ತಿಂತೀದಾಳೆ" ಅಂತ ಇವರಿಗೆ ಫೋನು ಮಾಡಿದ್ರು.

ಈಗ ಇಬ್ರೂ ಮಾತಾಡ್ತೀವೀ, ಆಫೀಸಿನಲ್ಲಿ ಬಾಸ ಬಯ್ದುದ್ದರಿಂದ ಹಿಡಿದು, ದಾರೀಲಿ ಕಂಡ ಹುಡುಗಿ ಮುಗುಳ್ನಗೆ ಕೊಟ್ಟದ್ದರವರೆಗೆ ಎಲ್ಲಾ ವರದಿ ಕೊಡ್ತಾರೆ, ಎಲ್ಲ ಮುಚ್ಚು ಮರೆಯಿಲ್ದೇ ಮಾತಾಡ್ತೀವಿ, ಮಾತು ಬೆಳ್ಳಿ ಮೌನ ಬಂಗಾರ ಅಂತಾರೆ ಆದರೆ ದಂಪತಿಗಳಿಗೆ ಅದು ತದ್ವಿರುದ್ಧ ಅನಿಸುತ್ತದೆ, ಹಿತ ಮಿತವಾದ ಮಾತು ಅದೂ ಗೆಳೆಯ ಗೆಳತಿಯರಂತೆ ಇದ್ದರೆ ಅದೇ ಬಂಗಾರ. ಅಯ್ಯೊ ನಿಮ್ಮೊಟ್ಟಿಗೆ ಮಾತಾಡ್ತಾ ಕೂತು ಸಮಯ ಆಗಿದ್ದೇ ಗೊತ್ತಾಗಲಿಲ್ಲ, ಇವರಿನ್ನೂ ಮಲಗಿದ್ರೆ ಹೇಗೆ, ಮತ್ತೆ ಸಿಕ್ತೀನಿ, ಇಲ್ಲ ಇವರೇ ನನ್ನ ಬಗ್ಗೆ ಬರೀತಾ ಇರ್ತಾರಲ್ಲ.

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...